ದಿನಾಂಕಃ **31-10-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಬಿ ಕೆ ಎನ್ ಕೀಲರಿಂದ,**

1) ವಾದಿಯ ತಾಯಿಯ ಹೆಸರು ಶೋಭಾ. ನಾನು ಮತ್ತು ವಾದಿ ಒಂದೇ ಸಮಾಜದವರು ಎಂದರೆ ಸರಿ. ಶೋಭಾ ರವರು ನಮ್ಮ ಗ್ರಾಮದವರು ಎಂದರೆ ಸರಿ. ನಮ್ಮ ಮನೆ ಶೋಭಾ ರವರ ಮನೆ ಸುಮಾರು ಅರ್ಧ ಕಿ.ಮೀ ದೂರದಲ್ಲಿದೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಖಾಸಗಿ ಕೆಲಸ ಮಾಡುತ್ತೇನೆ ಎಂದು ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ವಾದಿ ನನಗೆ ಪರಿಚಯ ಇರುವುದಿಲ್ಲ. ಪ್ರತಿವಾದಿ ಪರಿಚಯ ಇರುವುದಿಲ್ಲ. ಕರಾರು ಪತ್ರ ಯಾವಾಗ ನೊಂದಣಿ ಆಯಿತು ಎಂದು ದಿನಾಂಕ ನನಗೆ ನೆನಪಿಲ್ಲ. ನಿಪಿ 1 ಕರಾರು ಪತ್ರದಲ್ಲಿ ದಿಃ 20-04-2019 ಎಂದು ನಮೂದಿದೆ ಎಂದರೆ ಸರಿ. ಸದರಿ ದಿನಾಂಕದಂದು ನಾನು ಸಹಿ ಹಾಕಿರುತ್ತೇನೆ. ವಾದಿಯ ತಾಯಿ ಛಾಪಾ ಕಾಗದ ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2) ಶೋಭಾ ಮತ್ತು ಪ್ರತಿವಾದಿ ನಡುವೆ ಆಗಿರುವ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ನಗದು ರೂಪದಲ್ಲಿ ಒಂದೂವರೆ ಲಕ್ಷ ಮತ್ತು ಚೆಕ್ ಮೂಲಕ ಒಂದೂವರೆ ಲಕ್ಷ ಮೊತ್ತವನ್ನು ಪ್ರತಿವಾದಿಗಳಿಗೆ ನೀಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಹಣದ ವ್ಯವಹಾರ ಅಗಿರುವುದಿಲ್ಲ ಎಂದರೆ ಸರಿಯಲ್ಲ. ಬಡ್ಡಿ ವ್ಯವಹಾರಕ್ಕಾಗಿ ನಿಪಿ 1 ಕರಾರು ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ನನಗೆ ಸಂಬಂಧಿಕರಾಗಿರುವುದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.

ದಿನಾಂಕಃ **31-10-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಬಿ ಕೆ ಎನ್ ಕೀಲರಿಂದ,**

1) ನಿಪಿ 1 ಕರಾರು ಪತ್ರ ದಿಃ 20-04-2019 ರಂದು ನೊಂದಣಿ ಆಗಿರುತ್ತದೆ ಎಂದರೆ ಸರಿ. ವಾದಿಯ ತಾಯಿಯ ಹೆಸರು ಶೋಭಾ. ಸದರಿ ಯವರು ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿದ್ದರು ಎಂದರೆ ಸರಿ. ಶೋಭಾ ರವರು ಮಿರ್ಲೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ವಾದಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ಛಾಪಾ ಕಾಗದ ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ವ್ಯವಹಾರಗಳನ್ನು ವಾದಿಯ ತಾಯಿ ನೋಡಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ತನ್ನ ಗ್ರಾಮಕ್ಕೆ ಯಾವಾಗ ಬಂದು ಹೋಗುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಒಂದೇ ಸಮಾಜಕ್ಕೆ ಸೇರುತ್ತೇವೆ ಎಂದರೆ ಸರಿ.

2) ಪ್ರತಿವಾದಿಗಳು ಮತ್ತು ವಾದಿಯ ತಾಯಿಯ ನಡುವೆ ಹಣಕಾಸಿನ ವ್ಯವಹಾರ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಿಃ 20-04-2019 ರಂದು ನಾನು ನನ್ನ ಕೆಲಸದ ನಿಮಿತ್ತ ಉಪನೊಂದಣಾಧಿಕಾರಿ ಕಛೇರಿ ಬಳಿ ಇದ್ದಾಗ ಪ್ರತಿವಾದಿಗಳು ನನ್ನನ್ನು ಕರೆದಿರುತ್ತಾರೆ. ನನ್ನ ಸಮಕ್ಷಮ ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ವಾದಿಯರ ಸೂಚನೆ ಮೇರೆಗೆ ನಾನು ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪತ್ರಕ್ಕೆ ಸಹಿ ಮಾಡಿರುವುದನ್ನು ಹೊರತುಪಡಿಸಿ ಬೇರೆ ವ್ಯವಹಾರ ಗೊತ್ತಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳು ಉಪನೊಂದಣಾಧಿಕಾರಿಗಳ ಸಮಕ್ಷಮ ಮೂರು ಲಕ್ಷ ಹಣ ಪಡೆದಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಗದು

ರೂಪದಲ್ಲಿ ಒಂದೂವರೆ ಲಕ್ಷ ಮತ್ತು ಚೆಕ್ ಮೂಲಕ ಒಂದೂವರೆ ಲಕ್ಷ ಮೊತ್ತವನ್ನು ವಾದಿ ಪ್ರತಿವಾದಿಗಳಿಗೆ ನೀಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ನಡುವೆ ಹಣಕಾಸಿನ ವ್ಯವಹಾರ ಬಡ್ಡಿಗಾಗಿ ಆಗಿರುತ್ತದೆ ಎಂದರೆ ಸರಿಯಲ್ಲ.

3) ಪ್ರತಿವಾದಿಗಳು ವಾದಿಯ ತಾಯಿ ಶೋಭಾ ರವರ ಬಳಿ ರೂ 1,50,000/- ಹಣವನ್ನು ಸಾಲವಾಗಿ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ಮತ್ತು ಪ್ರತಿವಾದಿಗಳ ನಡುವೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಐದೂವರೆ ಲಕ್ಷ ಕ್ಕೆ ಜಮೀನು ಮಾರಾಟ ಮಾಡುತ್ತೇವೆ ಮತ್ತು ಮೂರು ಲಕ್ಷ ಹಣವನ್ನು ಮುಂಗಡವಾಗಿ ಪಡೆದಿರುವುದಾಗಿ ನುಡಿಯುತ್ತಾರೆ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರಕ್ಕೆ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ದಿಃ 20-04-2019 ರಂದು ಸಹಿ ಮಾಡಿರುತ್ತೇನೆ. ನಾನು ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.